ಕರ್ನಾಟಕ ಸರ್ಕಾರ
(ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಬಿಟಿಇ/05/ಇಎಪಿ/2022.

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದಿನಾಂಕ: 11.05.2022.

## ಜ್ಞಾಪನ

**ವಿಷಯ:** ತಾಂತ್ರಿಕ ಪರೀಕ್ಷಾ ಮಂಡಳಿಯು 2021-22ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸುವ ಆಗಸ್ಟ್/ಸೆಪ್ಟೆಂಬರ್ 2022ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:**
1 ಈ ಕಛೇರಿ ನೋಟಿಫಿಕೇಷನ್ ಸಂಖ್ಯೆ:ಬಿಟಿಇ/24/ಇಎಪಿ/97, ದಿ: 31-12-97.
2 ಸರ್ಕಾರಿ ಆದೇಶ ಸಂ:ಇಡಿ/245/ಟಿಪಿಇ 98, ದಿನಾಂಕ: 11-08-2000
3 ಸರ್ಕಾರಿ ಆದೇಶ ಸಂ:ಇಡಿ/257/ಟಿಪಿಇ/2003, ದಿ: 31-3-2004
4 ಸರ್ಕಾರಿ ಆದೇಶ ಸಂ:ಇಡಿ/11/ಟಿಪಿಇ/2007 ಬೆಂಗಳೂರು, ದಿ: 3-12-2007
5 ಸರ್ಕಾರಿ ಆದೇಶ ಸಂ:ಇಡಿ/215/ಟಿಪಿಇ/2010, ದಿ: 2-8-2010
6 ಸರ್ಕಾರಿ ಆದೇಶ ಸಂ:ಸಕಇ/357/ಬಿಎಂಎಸ್/2012, ಬೆಂಗಳೂರು, ದಿ: 7-11-2012
7 ಸರ್ಕಾರಿ ಆದೇಶ ಸಂಖ್ಯೆ:ಇಡಿ/222/ಟಿಪಿಇ/2012, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2012.

-0-0-

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಪರೀಕ್ಷಾ ಮಂಡಳಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ 2021-22ನೇ ಶೈಕ್ಷಣಿಕ ಸಾಲಿನ ಆಗಸ್ಟ್/ಸೆಪ್ಟೆಂಬರ್ 2022ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ (Technical / Non-Technical Student) ಶುಲ್ಕ ಪಾವತಿಸುವ ಬಗ್ಗೆ ಸಂಪೂರ್ಣ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅಂತಹ ವಿದ್ಯಾರ್ಥಿಗಳು ತಮ್ಮ ಸಂಸ್ಥೆಯಲ್ಲಿ ನಿಗಧಿತ ದಿನಾಂಕದ ಒಳಗೆ ನಿಗಧಿತ ಶುಲ್ಕ ಪಾವತಿಸಲು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಈ ಕೆಳಗೆ ತಿಳಿಸಲಾದ ಪ್ರಕಾರ ನಿಗದಿಪಡಿಸಲಾದ ದಂಡ ಶುಲ್ಕ ಪಾವತಿಸಬೇಕಾಗುತ್ತದೆ.

1. **ಸಂಸ್ಥೆಯಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ವಿವರ:**

**ದಂಡರಹಿತ:**

ಎ) ದಿನಾಂಕ: **13-05-2022 ರಿಂದ 21-06-2022 ರವರೆಗೆ**(ಎರಡೂ ದಿನಗಳು ಸೇರಿ) ದಂಡ ರಹಿತವಾಗಿ.

**ದಂಡಸಹಿತ:**

ಬಿ) ಮೊದಲನೇ ಹಂತ ದಿನಾಂಕ: **22-06-2022 ರಿಂದ 28-06-2022** ರವರೆಗೆ (ಎರಡೂ ದಿನಗಳೂ ಸೇರಿ) ರೂ.50-00 (ರೂಪಾಯಿ ಐವತ್ತು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಸಿ) ಎರಡನೇ ಹಂತ ದಿನಾಂಕ: **29-06-2022 ರಿಂದ 05-07-2022** ರವರೆಗೆ (ಎರಡೂ ದಿನ ಸೇರಿ) ರೂ.100/- (ರೂಪಾಯಿ ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಡಿ) ಮೂರನೇ ಹಂತ ದಿನಾಂಕ: **06-07-2022 ರಿಂದ 12-07-2022** ರವರೆಗೆ(ಎರಡೂ ದಿನ ಸೇರಿ) ರೂ.200/- (ರೂಪಾಯಿ ಇನ್ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಇ) ನಾಲ್ಕನೇ ಹಂತ ದಿನಾಂಕ: **13-07-2022 ರಿಂದ 19-07-2022** ರವರೆಗೆ (ಎರಡೂ ದಿನ ಸೇರಿ) ರೂ.400/- (ರೂಪಾಯಿ ನಾಲ್ಕು ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

{ಪು.ತಿ.ನೋ}

ಈ) ದಿನಾಂಕ: **20-07-2022** ರಿಂದ ಪರೀಕ್ಷೆ ಪ್ರಾರಂಭವಾಗುವ **15** ದಿನಗಳ ಮೊದಲು ರೂ. **2,000-00** (ರೂಪಾಯಿ ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ. [ಈ ಶುಲ್ಕ ಪಾವತಿಸುವ ಮುನ್ನ ನಿರ್ದೇಶಕರು / ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು. ವಿಶೇಷ ಶುಲ್ಕ ಪಾವತಿಸಲು ವಿದ್ಯಾರ್ಥಿಯು ತನ್ನ ಅರ್ಜಿಯನ್ನು ಸಂಸ್ಥೆಯ ಮುಖಾಂತರ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಯಲ್ಲಿ ವಿದ್ಯಾರ್ಥಿಯ ಸಂಪೂರ್ಣ ಹಾಜರಾತಿ ಮಾಹಿತಿ ಹಾಗೂ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲು ತಿಳಿಸಲಾಗಿದೆ.]

**ಸೂಚನೆ(i) ಉಲ್ಲೇಖ(4)ರ ಸರ್ಕಾರಿ ಆದೇಶದ ಪ್ರಕಾರ ಸಂಸ್ಥೆಯ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಪಡೆಯತಕ್ಕದ್ದು.**

| | | |
|---|---|---|
| ಅ) | ಪ್ರತಿ ಸೆಮಿಸ್ಟರ್‌ನ ಪೂರ್ತಿ ಪರೀಕ್ಷೆಗೆ | ರೂ.300-00 |
| ಆ) | ಪ್ರತಿ ಸೆಮಿಸ್ಟರ್‌ನ 1 ವಿಷಯಕ್ಕೆ | ರೂ.200-00 |
| ಇ) | ಪ್ರತಿ ಸೆಮಿಸ್ಟರ್‌ನ 2 ವಿಷಯಕ್ಕೆ | ರೂ.200-00 |
| ಈ) | ಪ್ರತಿ ಸೆಮಿಸ್ಟರ್‌ನ 3 ವಿಷಯಕ್ಕೆ | ರೂ.300-00 |

**ಸೂಚನೆ(ii) ಪರೀಕ್ಷಾ ಶುಲ್ಕದೊಂದಿಗೆ ಪ್ರತಿ ಸೆಮಿಸ್ಟರ್ ಪರೀಕ್ಷೆಯ ಅಂಕಪಟ್ಟಿಗಾಗಿ ರೂ.50-00 ಪಡೆಯುವಂತೆ ತಿಳಿಸಲಾಗಿದೆ.**

**ಸೂಚನೆ(iii) ತಾಂತ್ರಿಕ ಪರೀಕ್ಷಾ ಮಂಡಳಿಯ 178ನೇ ಕೇಂದ್ರ ಸಭೆಯ ನಿರ್ಣಯದಂತೆ C-03 ಪಠ್ಯಕ್ರಮದ I,II,III,IV, V & VI ನೇ ಸೆಮಿಸ್ಟರ್‌ಗಳ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ಪಠ್ಯ ವಿಷಯಗಳಿಗೆ 2022ರ ಆಗಸ್ಟ್/ಸೆಪ್ಟೆಂಬರ್ ಪರೀಕ್ಷೆ ಕೊನೆಯ ಅವಕಾಶವಾಗಿದ್ದು, 2023ರ ಮಾರ್ಚ್/ಏಪ್ರಿಲ್ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.**

**ಸೂಚನೆ(iv)**

**(ಎ) ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯ ಎಲ್ಲಾ ರೀತಿಯ ಶುಲ್ಕಗಳನ್ನು ಖಜಾನೆ-2(K2) ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು.(0202-02-101-0-01 ಲೆಕ್ಕಶೀರ್ಷಿಕೆ)**

**(ಬಿ) ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತ್ಯೇಕವಾಗಿ ಚಲನ್‌ಗಳನ್ನು ಜನರೇಟ್ ಮಾಡಿಸಿಕೊಂಡು K2 ಮುಖಾಂತರವೇ ಪಾವತಿಸತಕ್ಕದ್ದು.**

**(ಸಿ) K2 ಚಲನ್ ಸಂಖ್ಯೆಯನ್ನು BTELinx ವೆಬ್‌ಪೋರ್ಟಲ್‌ನೊಂದಿಗೆ ಜೋಡಿಸಲಾಗುವುದು. ವಿದ್ಯಾರ್ಥಿಯ K2 ಚಲನ್ ಸಂಖ್ಯೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ.**

**(ಡಿ) K2 ಚಲನ್ ಮುಖಾಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿದ್ದಲ್ಲಿ ಅದರಿಂದ ಮುಂದೆ ಉಂಟಾಗುವ ಬಾಧಕಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.**

**(ಈ)** **ಸರ್ಕಾರಿ ಆದೇಶ ಸಂಖ್ಯೆ: ಸಕಇ/178/ಪಕವಿ/2015, ಬೆಂಗಳೂರು, ದಿ: 31.12.2015ರಲ್ಲಿ ನಿಗದಿಪಡಿಸಿರುವಂತೆ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಚಾಲ್ತಿಗೆ ಬರುವ ಸರ್ಕಾರಿ ಆದೇಶಗಳನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ/ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

**(ಎಫ್)**** ಸರ್ಕಾರಿ ಆದೇಶ ಸಂಖ್ಯೆ:ಹಿಂವಇ/397/ಬಿಎಂಎಸ್/2013, ಬೆಂಗಳೂರು, ದಿನಾಂಕ: 5-9-2013 ಮತ್ತು ಹಿಂವಕ/589/ಬಿಎಂಎಸ್/2013, ದಿ:5.10.2013 & ತಿದ್ದುಪಡಿ ಹಾಗೂ ಸೇರ್ಪಡೆ ಆದೇಶ ದಿ: 6.8.2014 ಗಳಲ್ಲಿ ನಿಗದಿಪಡಿಸಿರುವಂತೆ ಪ್ರವರ್ಗ-1, 2ಎ, 3ಎ, & 3ಬಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

{ಮು.ತಿ.ನೋ}

(ಜಿ)** ಸರ್ಕಾರಿ ಆದೇಶ ಸಂಖ್ಯೆ:ಎಂಡಬ್ಲ್ಯುಡಿ/21/ಎಂಡಿಎಸ್/2011, ಬೆಂಗಳೂರು, ದಿ: 2-8-2014 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯುಡಿ /400/ಎಂಡಿಎಸ್/2014, ದಿ: 17.10.2014 ರ ಪ್ರಕಾರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕುಟುಂಬದ ಆದಾಯವನ್ನು ನಿಗಧಿಪಡಿಸಲಾಗಿರುತ್ತದೆ ಹಾಗೂ ನಿಯಮಾನುಸಾರ ಉಲ್ಲೇಖ[4]ರ ಸರ್ಕಾರಿ ಆದೇಶದ ಪ್ರಕಾರ ಪರೀಕ್ಷಾ ಶುಲ್ಕವನ್ನು ಮತ್ತು ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ. 50/- ನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಡೆಯುವಂತೆ ತಿಳಿಸಲಾಗಿದೆ.

**(ಹೆಚ್)** ಪರೀಕ್ಷಾ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಸಕಇ/357/ ಬಿಎಂಎಸ್/ 2012, ಬೆಂಗಳೂರು, ದಿನಾಂಕ:7.11.2012ರ ಆದೇಶವನ್ನು ಪಾಲಿಸುವುದು.

(ಐ) ಎಲ್ಲಾ ವರ್ಗದ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವವರು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅರ್ಹರಲ್ಲ. ಆದ್ದರಿಂದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸತಕ್ಕದ್ದು.

(ಜೆ) ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇಲ್ಲಿ ಯಾವುದೇ ಪರೀಕ್ಷಾ ಶುಲ್ಕವನ್ನು ಪಡೆಯಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಗಮನಿಸುವುದು ಮತ್ತು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ಸ್ಪಷ್ಟನೆ ಕೋರಬಹುದಾಗಿದೆ.

(2) ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕವನ್ನು **K2** ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕಶೀರ್ಷಿಕೆ 0202-02-101-0-01 ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

**ವಿಶೇಷ ಸೂಚನೆ:**

(i) ಸಂಸ್ಥೆಯ ಪ್ರಾಚಾರ್ಯರುಗಳು ಪ್ರಥಮ ವರ್ಷದ ವಿದ್ಯಾರ್ಥಿಗಳ ಸಹಿತ ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನು ಕೂಡ ಕಡ್ಡಾಯವಾಗಿ ವಸೂಲು ಮಾಡುವುದು.

(ii) ಫಲಿತಾಂಶ ತಡೆ ಹಿಡಿಯಲಾದ/ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ಫಲಿತಾಂಶ ಪ್ರಕಟಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗುತ್ತದೆ.

(iii) **ಮಾರ್ಚ್/ಏಪ್ರಿಲ್** 2022ರ ಪರೀಕ್ಷೆಗಳಲ್ಲಿ ಶಂಕಿತ ಪರೀಕ್ಷಾ ದುರಾಚಾರದಡಿ ಪ್ರಕರಣ ದಾಖಲಾಗಿದ್ದು ಪ್ರಕರಣ ಇತ್ಯರ್ಥವಾಗಿರದ ವಿದ್ಯಾರ್ಥಿಗಳಿಗೆ ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ದುರಾಚಾರ ಪ್ರಕರಣ ಇತ್ಯರ್ಥಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು. ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನೂ ಕೂಡ ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗಿರುತ್ತದೆ.

(iv) 3ನೇ ಮತ್ತು 5ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ನೀಡುವಾಗ ಉಲ್ಲೇಖ(7)ರ ಸರ್ಕಾರಿ ಆದೇಶದಲ್ಲಿ ಕ್ರಮಸಂಖ್ಯೆ (8)ರಲ್ಲಿ ವಿವರಿಸಿರುವಂತೆ ನಡೆದುಕೊಳ್ಳುವುದು.

(v) ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು, ವಿಭಾಗಾಧಿಕಾರಿಗಳು, ಸಂಬಂಧಪಟ್ಟ ವಿಷಯ ನಿರ್ವಾಹಕರು ತಮ್ಮ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, Candidate List ಅನ್ನು ಇಂದೀಕರಿಸುವುದು ಅತ್ಯಂತ ಪ್ರಮುಖವಾದುದು ಎಂಬುದನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ಸೂಚ್ಯವಾಗಿ ತಿಳಿಸಲಾಗಿದೆ.

ಪ್ರಯುಕ್ತ ಆಗಸ್ಟ್/ಸೆಪ್ಟೆಂಬರ್ 2022ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರಗಳನ್ನು ಪರೀಕ್ಷಾ ಶುಲ್ಕ ಪಾವತಿಸಿದ ಕೂಡಲೇ ತಾವು ಈಗಾಗಲೇ ಉಪಯೋಗಿಸುತ್ತಿರುವ BTE Linx ಆನ್‌ಲೈನ್ ವೆಬ್‌ಪೋರ್ಟಲ್‌ನಲ್ಲಿ ಇರುವಂತಹ

{ಪು.ತಿ.ನೋ}

ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ **K2 ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ** ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ. ಈ ವಿವರಗಳ ಆಧಾರದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಸಂಸ್ಥೆಗಳಲ್ಲಿಯೇ ಮುದ್ರಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಪ್ರಾಚಾರ್ಯರುಗಳು ಹೆಚ್ಚಿನ ಮುತುವರ್ಜಿ ವಹಿಸಲು ತಿಳಿಸಲಾಗಿದೆ.

(vi) ಮಾರ್ಚ್/ಏಪ್ರಿಲ್ 2022ರ ಪರೀಕ್ಷೆಗಳ ಮಾರ್ಕ್ಸ್ ಲೆಡ್ಜರ್‌ಗಳನ್ನು ಹಿಂದಿನಂತೆಯೇ ಈಗಾಗಲೇ ಉಪಯೋಗಿಸುತ್ತಿರುವ BTE Linx ಆನ್‌ಲೈನ್ ವೆಬ್‌ಪೋರ್ಟಲ್ ಮೂಲಕ ಸಂಬಂಧ ಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳು download ಮಾಡಿಕೊಳ್ಳಬೇಕಾಗುತ್ತದೆ.

**ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

11/05/2022

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಆಯುಕ್ತರ ಆಪ್ತ ಶಾಖೆಗೆ – ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತ ಶಾಖೆಗೆ – ಅವಗಾಹನೆಗಾಗಿ.
3. ಕಾರ್ಯದರ್ಶಿಗಳ ಆಪ್ತ ಶಾಖೆಗೆ.
4. ಉಪ ನಿರ್ದೇಶಕರು (ಪರೀಕ್ಷೆ)
5. ಇ–ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
6. ಇಸಿಎಸ್ ವಿಭಾಗಕ್ಕೆ – ಮಾಹಿತಿಗಾಗಿ.
7. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ರಿಜಿಸ್ಟ್ರಾರ್ (ಪರೀಕ್ಷೆ)
9. ಅಧೀಕ್ಷಕರು (ಆರ್.ಡಿ.ಎಂ. (1) ರಿಂದ (15)
10. ಕಛೇರಿ ಪ್ರತಿ.

ಡಿ.ಇ.ಪ್ರ.